ದಿನಾಂಕ 29-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯವಿಚಾರಣೆಃ ಸ.ಸ.ಅ ರವರಿಂದ**

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಫೋಟೋಗಳನ್ನು ತೋರಿಸಿದ್ದು, ಸಾಕ್ಷಿಯು ಆ ಕಾಲಕ್ಕೆ ನಾನು ಇರಲಿಲ್ಲ ಎನ್ನುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃಃ ಮಾನ್ಯ ಸ.ಸ.ಅ. ರವರಿಂದಃಃ**

ಏಕೆ ಟ್ರಾನ್ಸಫರ್ ಮಾಡಿಸಿದಲೇ ಮಗನೇ ಇಲ್ಲಿ ನೀನು ಹೆಂಗ ಕೆಲಸ ಮಾಡತಿ ನಾನು ನೋಡತ್ತೀನಲೇ ಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದು, ಚಪ್ಪಲಿಯಿಂದ ಬೆನ್ನಿಗೆ ಆರೋಪಿ ಹೊಡೆದ ಎಂದು ಹೇಳಿ ನಿಮ್ಮ ಹೇಳಿಕೆಯಲ್ಲಿ ಬರೆಸಿದ್ದಿರಿ ಎಂದರೆ ಸರಿ.ನಾನು ಇವನನ್ನು ಜೀವಂತ ಬಿಡುವುದಿಲ್ಲ ನೋಡಿಕೊಳ್ಳುತ್ತೇನೆ ಎಂದು ಆರೋಪಿ ಹೇಳಿದ್ದ ಎಂದು ಹೇಳಿ ನಿಮ್ಮ ಹೇಳಿಕೆಯಲ್ಲಿ ಬರೆಸಿದ್ದಿರಿ ಎಂದರೆ ಸರಿ. ಮೇಲೆ ಹೇಳಿದ ಫೋಟೋದ ಬಗ್ಗೆ ನಿಮಗೆ ಗೊತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ-**

1. ನನಗೆ 4 ಸ್ಟೇಷನ್‌ಗಳ ಮೇಲುಸ್ತುವಾರಿ ಕೊಟ್ಟಿದ್ದರು, ಅವುಗಳೆಂದರೆ ಗೋರೆಬಾಳ, ಒಳಬಳ್ಳಾರಿ, ಕುರುಕುಂದಾ, ಬಳಗನೂರು. ಪ್ರತೀ ಸ್ಟೇಷನ್ ಬಿಡುವ ಮುಂಚೆ ಮೂಮೆಂಟ್‌ನಲ್ಲಿ ನಮೂದಿಸಿಬಿಡಬೇಕು ಎಂದರೆ ಸಾಕ್ಷಿಯು ಇಲ್ಲ, ಆ ರೀತಿ ಸಹಿ ಮಾಡುತ್ತಿರಲಿಲ್ಲ ಎನ್ನುತ್ತಾರೆ. ಪ್ರತೀ ಸ್ಟೇಷನ್ ನಿಂದ ಇನ್ನೊಂದು ಸ್ಟೇಷನ್‌ಗೆ ಹೋಗಲು ಅನುಮತಿ ಪಡೆಯುತ್ತಿದ್ದೆ.

2. ಘಟನಾ ದಿನ 11-30 ಕ್ಕೆ ಗೋರೆಬಾಳ ಸ್ಟೇಷನ್‌ನಲ್ಲಿ ಕಾರ್ಯನಿರ್ವಹಿಸಿಕೊಂಡು ಬಂದಿದ್ದೆ. ಆ ದಿನ ನೀವು ವಲ್ಕಂದಿನ್ನಿ, ಒಳಗಳ್ಳಾರಿ, ತುರುವಿಹಾಳ ಠಾಣೆಗಳ ಇನ್ಚಾರ್ಜ್ ಇದ್ದಿರಿ ಎಂದರೆ ಸರಿ. ಒಳಬಳ್ಳಾರಿಯಿಂದ ಸಿಂಧನೂರು 35 ಕಿಮೀ. ವಲ್ಕಂದಿನ್ನಿಯಿಂದ ಸಿಂಧನೂರು 30 ರಿಂದ 35 ಕಿ.ಮೀ. ಅಂತರ ಇರಬಹುದು. ನೀವು ಆ ದಿನ ಕರ್ತವ್ಯದಲ್ಲಿದ್ದಿರಿ ಎಂದು ದಾಖಲೆ ಹಾಕಿಲ್ಲ ಎಂದರೆ ಸರಿಯಲ್ಲ.

3. ನಾನು ಆ ದಿನ ನನ್ನ ಲೀವ್ ಸರೆಂಡರ್ ಬಗ್ಗೆ ಕೇಳಿಕೊಂಡು ಹೋಗಲು ಸಿಂಧನೂರಿಗೆ ಬಂದಿದ್ದೆ. ನೀವು ಫೋನ್ ಮಾಡಿ ಕೇಳಿದರೆ ನಿಮ್ಮ ಸಿಬ್ಬಂದಿ ನಿಮ್ಮ ಗಳಿಕೆ ರಜೆಗಳ ಬಗ್ಗೆ ಹೇಳುತ್ತಿದ್ದಿಲ್ಲವಾ ಎಂದರೆ ಸಾಕ್ಷಿಯು ಹೇಳುತ್ತಿದ್ದರು, ನಾನು ಫ್ರೀ ಇದ್ದೆ, ಆದ್ದರಿಂದ ಬಂದಿದ್ದೆ ಎನ್ನುತ್ತಾರೆ.

4. ಚಾಸಾ-1 ರವರು ನಿಮ್ಮ ಜಾತಿಯವರು ಎಂದರೆ ಸರಿ. ಆ ಕಾಲಕ್ಕೆ ನಾನು ಕೆ ಇ ಬಿ ಕ್ವಾಟ್ರಸ್‌ನಲ್ಲಿ ವಾಸ ಇದ್ದೆ. ಅಲ್ಲಿ ನಾನು 13 ವರ್ಷಗಳ ಕಾಲ ವಾಸವಾಗಿದ್ದೆ. ನನ್ನ ಸಂಬಳದಲ್ಲಿ ಹೆಚ್ ಆರ್ ಎ ಕಡಿತವಾಗುತ್ತಿತ್ತು.

5. ನೀವು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಹೇಳಿ ನಿಮ್ಮ ಮೇಲೆ ಕೇಸುಗಳು ಆಗಿತ್ತು, ನಿಮ್ಮ ವಿರುದ್ಧ ಅಂತಿಮ ವರದಿ ಸಲ್ಲಿಸಿದ್ದರು ಎಂದರೆ ಸಾಕ್ಷಿಯು ನಾನು ಯಾವುದೇ ಕೇಸಿಗಾಗಿ ಠಾಣೆಗೆ ಓಡಾಡಿಲ್ಲ ಎನ್ನುತ್ತಾರೆ. ಸೋಮಲಾಪುರದಲ್ಲಿ ಒಂದು ಮಗು ನಿಧನವಾಗಿತ್ತು ಆ ವಿಚಾರವಾಗಿ ಗ್ರಾ.ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು, ನೀವು ನ್ಯಾಯಾಲಯಕ್ಕೆ ಓಡಾಡಿರುತ್ತೀರಿ ಎಂದರೆ ಸರಿಯಲ್ಲ. ನನ್ನ ಮೇಲೆ ಯಾವುದೇ ಪ್ರಕರಣ ಆಗಿಲ್ಲ.

6. ನಾನು 4-45 ಕ್ಕೆ ಡಿವಿಜನ್ ಕಛೇರಿಗೆ ಬಂದಿದ್ದೆ. ಸದರಿ ಕಛೇರಿಯಲ್ಲಿ 12-13 ಜನ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಾರೆ. ಜಗಳ ಪ್ರಾರಂಭವಾದಾಗ 4-45 ಕ್ಕೆ ಶುರುವಾಗಿತ್ತು. ನಾನು ಹೋದಾಗ ಆರೋಪಿ ಒಳಗಿದ್ದ, ಚಾಸಾ-1 ರವರು ಛೇಂಬರ್‌ನಲ್ಲಿದ್ದರು. ನಾನು ನಿಂತ ಸ್ಥಳದಿಂದ ಛೇಂಬರ್‌ಗೆ 7-8 ಅಡಿ ದೂರ ಇತ್ತು. ಚಾಸಾ-1 ರವರ ಛೇಂಬರ್‌ಗೆ ಆಟೋಡೋರ್ ಇತ್ತು. ಆಟೋಡೋರ್ ಒಳಗಡೆ ಯಾರು ಏನು ಮಾಡುತ್ತಾರೆಂದು ಹೊರಗಿದ್ದವರಿಗೆ ಕೇಳಿಸುವುದಿಲ್ಲ ಎಂದೆ ಸಾಕ್ಷಿಯು ಡೋರ್ ಹಾಕಿರಲಿಲ್ಲ ಎನ್ನುತ್ತಾರೆ. ಅಲ್ಲಿದ್ದ ಸಿಬ್ಬಂದಿಗಳು ಹೋಗಿ ಬಿಡಿಸುವ ಪ್ರಯತ್ನ ಮಾಡಿರಲಿಲ್ಲ. ನಾನು ಬಿಡಿಸುವ ಪ್ರಯತ್ನ ಮಾಡಿದ್ದೆ, ಆದರೆ ಆಗಲಿಲ್ಲ.

7. ನೀವು ಘಟನಾ ಕಾಲಕ್ಕೆ ಡಿವಿಜನ್ ಕಛೇರಿಗೆ ಬಂದೇ ಇರಲಿಲ್ಲ, ನೀವು ಆ ಕಾಲಕ್ಕೆ ಇರಲಿಲ್ಲ ಎಂದರೆ ಸರಿಯಲ್ಲ. ನಿಮಗೆ ಡಿವಿಜನ್ ಕಛೇರಿಗೆ ಬರುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಗಲಾಟೆ ಆಗಿತ್ತು, ಆರೋಪಿ ಚಾಸಾ-1 ರವರಿಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. ಗಲಾಟೆ 5-30 ರಿಂದ 5-45 ರವರೆಗೆ ನಡೆದಿತ್ತು. ಡಿವಿಜನ್ ಕಛೇರಿ ಅಕ್ಕಪಕ್ಕದಲ್ಲಿ ಬೇರೆ ಬೇರೆ ಕಛೇರಿಗಳಿವೆ, ಅದರಲ್ಲಿದ್ದವರು ಏನು ಘಟನೆ ಎಂದು ನೋಡಲು ಬಂದಿರಲಿಲ್ಲ. ನಾನು ಆ ಕಾಲಕ್ಕೆ ಪೋಲೀಸರಿಗೆ ಕರೆ ಮಾಡಿ ಮಾಹಿತಿ ನೀಡಿಲ್ಲ. ಉಳಿದ ಸಿಬ್ಬಂದಿಗಳು ಸಹ ಪೋಲೀಸರಿಗೆ ಕರೆ ಮಾಡಿರಲಿಲ್ಲ.

8. ಆರೋಪಿ ಚಪ್ಪಲಿಯಿಂದ ಚಾಸಾ-1 ರವರಿಗೆ ಎಷ್ಟು ಏಟು ಹೊಡೆದಿದ್ದ ಎಂದರೆ ಸಾಕ್ಷಿಯು ಅದನ್ನು ಎಣಿಸಲು ಆಗುತ್ತದೆಯೇ, 5-6 ಬಾರಿ ಹೊಡೆದಿದ್ದನು. ಆ ಚಪ್ಪಲಿ ಯಾವ

ಕಾಲಿನದ್ದು ಎಂದರೆ ಸಾಕ್ಷಿಯು ನಾನು ಯಾವ ಕಾಲಿನದ್ದು ಎಂದು ನೋಡಿಲ್ಲ. ಅದರ ಬಣ್ಣ ಬ್ರೌನ್ ಕಲರ್ ಇತ್ತು. ಆ ಚಪ್ಪಲಿ ಹರಿದಿದ್ದನ್ನು ನಾನು ನೋಡಿರಲಿಲ್ಲ.

9. ಚಾಸಾ-1 ರವರ ಛೇಂಬರ್ & ಇನ್ನೊಂದು ಛೇಂಬರ್‌ಗೆ 4 ಅಡಿ ಅಂತರ ಇತ್ತು. ಆರೋಪಿ ಇನ್ನೊಂದು ಛೇಂಬರ್ ಗೆ ಹೋಗುವಾಗ ನಾನು ಆರೋಪಿಯನ್ನು ಹಿಡಿಯಲು ಪ್ರಯತ್ನಿಸಿರಲಿಲ್ಲ.

10. ಚಾಸಾ-1 ರವರು ಸೋಲಾರ್ ಸ್ಕೀಮಿನಲ್ಲಿ ದುರ್ಬಳಕೆ ಮಾಡಿಕೊಂಡು ಸಸ್ಪೆಂಡ್ ಆಗಿದ್ದರು ಎಂದರೆ ಸರಿಯಲ್ಲ. ಸದರಿ ಸ್ಕೀಮಿನಲ್ಲಿ ನೀವು ಸಹ ಅವರಿಗೆ ಸಪೋರ್ಟ್ ಮಾಡಿದ್ದಿರಿ, ನಿಮ್ಮದೂ ಸಹ ಅದರಲ್ಲಿ ಕೈವಾಡ ಇದೆ ಎಂದರೆ ಸರಿಯಲ್ಲ.

11. ಚಾಸಾ-1 ರವರು ಆ ದಿನ ವಾಚನ್ನು ಎಡಗೈಗೆ ಕಟ್ಟಿಕೊಂಡಿದ್ದರು. ಚಾಸಾ-1 ರವರಿಗೆ 5 ಗಂಟೆ ಸುಮಾರಿಗೆ ವಾಚಿನಿಂದ ಛೇಂಬರ್ ನಲ್ಲಿ ಆರೋಪಿ ಹೊಡೆದಿದ್ದನು. ಚಾಸಾ-1 ರವರು ಹಿಡಿದ ಕರ್ಚೀಫ್ ಯಾವ ಬಣ್ಣದ್ದು ಎಂದರೆ ಸಾಕ್ಷಿಯು ನಾಶೆ ಬಣ್ಣದ, ಪಟ್ಟೆ, ಪಟ್ಟೆ ಇತ್ತು ಎನ್ನುತ್ತಾರೆ. ವಾಚಿನಿಂದ ಹೊಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿ ಚಾಸಾ-1 ರವರನ್ನು ಬೆನ್ನತ್ತಿ ಚಪ್ಪಲಿಯಿಂದ ಹೊಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿ ಅವಾಚ್ಯವಾಗಿ ಬೈದು, ಜಾತಿ ನಿಂದನೆ ಕೇಸು ಹಾಕುತ್ತೇನೆಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

12. ಚಪ್ಪಲಿ ಯಾವ ಕಂಪನಿಯದ್ದು ಎಂದು ಹೇಳಲು ಆಗುವುದಿಲ್ಲ. ನೀವು ಚಪ್ಪಲಿ ಹರಿದಿಲ್ಲ ಎಂದು ಹೇಳಿರುತ್ತೀರಿ, ನ್ಯಾಯಾಲಯದ ಮುಂದೆ ಇರುವ ಚಪ್ಪಲಿ ಹರಿದಿದೆ, ಇದು ಅದಲ್ಲ ಅಂದರೆ ಸಾಕ್ಷಿಯು ಇದೇ ಆ ಚಪ್ಪಲಿ ಎನ್ನುತ್ತಾರೆ. ಸಾಕ್ಷಿಗೆ ನ್ಯಾಯಾಲಯದ ಮುಂದಿರುವ ಮು.ಮಾ. ಗಳನ್ನು ತೋರಿಸಿ, ಚಪ್ಪಲಿ, ಬನಿಯನ್ ಕರ್ಚೀಫ್ ಎಲ್ಲಾ ಅಂಗಡಿಗಳಲ್ಲಿ ದೊರೆಯುತ್ತವೆ ಎಂದರೆ ಸರಿಯಲ್ಲ. ಪೋಲೀಸರಿಗೆ ಸದರಿಯವುಗಳನ್ನು ಯಾವಾಗ ಕೊಟ್ಟರು ಎಂದು ನನಗೆ ಈಗ ನೆನಪಿಲ್ಲ.

13. ಆರೋಪಿ ಪರಿಶಿಷ್ಟ ವರ್ಗಕ್ಕೆ ಸೇರಿದ್ದರಿಂದ ನೀವು & ಚಾಸಾ-1 ರವರು ಒಂದೇ ಜಾತಿಯವರಾಗಿದ್ದರಿಂದ ಜಾತಿ ಬೇದ ಮಾಡುತ್ತಿದ್ದಿರಿ ಎಂದರೆ ಸರಿಯಲ್ಲ. ಆರೋಪಿ ಒಂದು ಗುಂಪನ್ನು ಚುನಾವಣೆಯಲ್ಲಿ ಬೆಂಬಲಿಸಿದರೆ, ನೀವು ಬೇರೆ ಹೇಳುತ್ತಿದ್ದಿರಿ, ಆರೋಪಿ ಚುನಾವಣೆ ಕಮಿಷನ್‌ನ ಮೆಂಬರ್ ಇದ್ದರು ಎಂದರೆ ಸರಿ. ಆರೋಪಿ ಗೆದ್ದಿದ್ದು, ನೀವು ನಿಮ್ಮ ಪೆನಾಲ್‌ನಲ್ಲಿ ಸೋತಿದ್ದಿರಿ ಎಂದರೆ ಸಾಕ್ಷಿಯು ಆಗ ನಾನು ಚುನಾವಣೆಗೆ ನಿಂತಿರಲಿಲ್ಲ, ನಮ್ಮ ಪೆನಾಲ್‌ನಿಂದ 9 ಜನ ಆಯ್ಕೆ ಆಗಿದ್ದರು, ಅವರ ಪೆನಾಲ್‌ನಿಂದ 4 ಜನ ಗೆದ್ದಿದ್ದರು ಎನ್ನುತ್ತಾರೆ. ಆಗಿನಿಂದಲೂ ಆರೋಪಿಗೂ ನಿಮಗೂ ವೈಮನಸ್ಸು ಇತ್ತು ಎಂದರೆ ಸರಿಯಲ್ಲ. ಈ ರೀತಿಯಾಗಿ ನಿಮ್ಮಿಬ್ಬರಿಗೂ ದ್ವೇಷ ಇತ್ತು, ವೈಮನಸ್ಸು ಸಾಧಿಸುತ್ತಿದ್ದಿರಿ ಎಂದರೆ ಸರಿಯಲ್ಲ.

14. ಹೆಚ್ ಆರ್ ಎ ಎಷ್ಟು ಕಟ್ ಆಗುತ್ತಿತ್ತು ಎಂದು ನನಗೆ ಈಗ ನೆನಪಿಲ್ಲ. ನಿಮ್ಮ ಹೆಚ್ ಆರ್ ಎ ಎಷ್ಟು ಕಟ್ ಆಗದಂತೆ ಚಾಸಾ-1 ರವರು ನೋಡಿಕೊಳ್ಳುತ್ತಿದ್ದರು, ಆದ್ದರಿಂದ ಅವರ ಮೇಲೆ ಆತ್ಮೀಯತೆ ಜಾಸ್ತಿ ಎಂದರೆ ಸರಿಯಲ್ಲ.

15. ನಿಮ್ಮ ಕರ್ತವ್ಯ ಬೇರೆ ಕಡೆ ಇದ್ದು, ನೀವು ಆ ದಿನ ಬಂದಿದ್ದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು & ಇನ್ನಿತರರು ಜಗಳ ಬಿಡಿಸಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ-**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ಸಿಂಧನೂರು.**